ಅ.ದಾ.ನಂ.496/2013
ಪಿ.ಡಬ್ಲೂ:1

**ಸಾಕ್ಷಿಯನ್ನು ಇಂದು ದಿನಾಂಕಃ 08.01.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲುಃ ಶ್ರೀ. ಎ ಎಸ್ ಕೆ ., ವಕೀಲರಿಂದ 3 ನೇ ಪ್ರತಿವಾದಿ ಪರವಾಗಿ**

1. ನನ್ನ ಅಜ್ಜನ ಹೆಸರು ಬಸಪ್ಪ ಇರುತ್ತದೆ. ನನ್ನ ಅಜ್ಜಿಯ ಹೆಸರು ಬಸವ್ವ ಇರುತ್ತದೆ. ನನ್ನ ಅಜ್ಜನಿಗೆ ಈರಪ್ಪ, ಲಕ್ಷ್ಮಣ ಮತ್ತು ಕಲ್ಲಪ್ಪ ಮೂರು ಮಕ್ಕಳು ಇರುತ್ತಾರೆ. ನಮ್ಮ ಅಜ್ಜನಿಂದ ನಮಗೆ ಎಷ್ಟು ಆಸ್ತಿಗಳು ಬಂದಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನನ್ನ ಅಜ್ಜಿ ಬಸವ್ವಳಿಗೆ ಎಷ್ಟು ಆಸ್ತಿಗಳು ಇದ್ದವು ಎಂಬುದು ನನಗೆ ಗೊತ್ತಿಲ್ಲ. ನನ್ನ ಅಜ್ಜಿಯು ಸಾಲಹಳ್ಳಿರವರ ಮನೆತನದವರು ಇರುತ್ತಾರೆ ಎಂದರೆ ಸರಿ. ನನ್ನ ಅಜ್ಜಿ ಬಸವ್ವಳಿಗೆ ಯಾವುದೇ ಅಣ್ಣ ತಮ್ಮಂದಿರು ಇರಲಿಲ್ಲ ಎಂದರೆ ಸರಿ. ನನ್ನ ಅಜ್ಜಿ ಬಸವ್ವಳಿಗೆ ಒಟ್ಟು 21 ಎಕರೆ ಜಮೀನು ಒಂದೇ ಕಡೆ ಇತ್ತು ಎಂದರೆ ಸರಿ. ನನ್ನ ಅಜ್ಜಿ ಬಸವ್ವಳಿಗೆ ಮತ್ತೊಂದು ಕಡೆ 06 ಎಕರೆ ಜಮೀನು ಇತ್ತು ಎಂದರೆ ಸರಿ.

2. ಸದರಿ 21 ಎಕರೆ ಜಮೀನನ್ನು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಕಲ್ಲಪ್ಪರವರು ಅರ್ಧ ಅರ್ಧ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಅಜ್ಜಿಯು ನನ್ನ ತಂದೆಗೆ ಅವರ ತವರು ಮನೆಯ ಕನ್ಯೆಯನ್ನು ತೆಗೆದುಕೊಂಡು 3 ನೇ ಪ್ರತಿವಾದಿಗೆ ಮದುವೆ ಮಾಡಿಕೊಳ್ಳುವಂತೆ ಹೇಳಿದ್ದಳು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಸಾಲಹಳ್ಳಿರವರ ಮನೆತನದ ಹೆಣ್ಣು ಮಗಳಾದ ಸೀತವ್ವಳನ್ನು ಮದುವೆ ಮಾಡಲಾಗಿರುತ್ತದೆ ಎಂದರೆ ಸರಿ.

3. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಮತ್ತು ಸದರಿ ದಾಖಲಾತಿಗಳಲ್ಲಿ ಬರೆದಿರುವ

ಅಂಶಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ದೊಡಪ್ಪ ಈರಪ್ಪ ಇಬ್ಬರೂ ಸೇರಿ ಕಲ್ಲಪ್ಪನ ಮಕ್ಕಳ ಮೇಲೆ ಅಸಲು ದಾವೆ ನಂ.227/2011 ರಂತೆ ಒಂದು ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಮಸೂತಿ ಗ್ರಾಮದ ಸರ್ವೆ ನಂ.308 ರ ಕ್ಷೇತ್ರ 3 ಎಕರೆ ತಲಾ ಒಂದೊಂದು ಎಕರೆ ಯಂತೆ ನನ್ನ ತಂದೆ, ನನ್ನ ದೊಡ್ಡಪ್ಪ ಮತ್ತು ನನ್ನ ಚಿಕ್ಕಪ್ಪನ ಮಕ್ಕಳು ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ 3 ಎಕರೆ ಕೂಡಗಿ ಶಾಖೋತ್ಪನ ಕೇಂದ್ರಕ್ಕೆ ಭೂಸ್ವಾಧೀನವಾಗಿರುತ್ತದೆ ಎಂದರೆ ಸರಿ. ಸದರಿ ಭೂಸ್ವಾಧೀನವಾದ ಜಮೀನಿನ ಪರಿಹಾರದ ಹಣ ನನ್ನ ತಂದೆಯ ಖಾತೆಗೆ ಜಮಾವಾಗಿರುತ್ತದೆ ಎಂದರೆ ಸರಿ. ಸದರಿ ಹಣವನ್ನು ನನ್ನ ತಂದೆಯು ನನಗೆ ಮತ್ತು ಉಳಿದ ಹೆಣ್ಣು ಮಕ್ಕಳಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

4. ನಂತರ ನನ್ನ ತಾಯಿಯು ನಮ್ಮ ಕುಟುಂಬದ ಆಸ್ತಿಗಳಲ್ಲಿರುವ ನಮ್ಮ ಹಕ್ಕುಗಳನ್ನು 3 ನೇ ಪ್ರತಿವಾದಿಗೆ ಬಿಟ್ಟುಕೊಡುವಂತೆ ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿಯ 3 ನೇ ಪ್ರತಿವಾದಿಗೆ ಹಕ್ಕು ಬಿಡದೇ ಇರುವುದರಿಂದ ನನ್ನ ತಾಯಿಯು ನನ್ನ ತಂದೆಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯು ದಿಃ12.12.2019 ರಂದು ದಾವಾ ಅಸ್ತಿಯನ್ನು 3 ನೇ ಪ್ರತಿವಾದಿಗೆ ಮೃತ್ಯು ಪತ್ರದ ಪ್ರಕಾರ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

5. ಈ ದಾವೆಯಲ್ಲಿ ನನ್ನ ತಂದೆಯು ಸಲ್ಲಿರುವ ಪ್ರತಿವಾದ ಪತ್ರವನ್ನು ನಾನು ನೋಡಿರುವುದಿಲ್ಲ. ನನ್ನ ತಂದೆಯು ನನ್ನ ಮತ್ತು 5 ಮತ್ತು 6 ನೇ ಪ್ರತಿವಾದಿಯರ ಮದುವೆಗಳ ಹಣದ ಖರ್ಚಿಗಾಗಿ ನನ್ನ ಅಜ್ಜನಿಂದ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜನಿಂದ ನನ್ನ ತಂದೆಗೆ ಒಟ್ಟು 5 ಎಕರೆ ಜಮೀನು ಬಂದಿತ್ತು ಎಂದರೆ ಸರಿ. ಸದರಿ 5 ಎಕರೆ ಜಮೀನಿನ ಪೈಕಿ 4 ಎಕರೆ ಜಮೀನನ್ನು ನನ್ನ

ತಂದೆಯು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ 4 ಎಕರೆ ಜಮೀನನ್ನು ಮಾರಾಟ ಮಾಡಿರುವುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಮದುವೆಗೆ ನನ್ನ ತಂದೆಯು ಯಾವುದೇ ಹಣವನ್ನು ಖರ್ಚು ಮಾಡಿರುವುದಿಲ್ಲ.

6. ಸಾಮಾನ್ಯವಾಗಿ ನನ್ನ ಮದುವೇಯ ಸಮಯದಲ್ಲಿ ಯಾವುದೇ ಒಂದು ಹೆಣ್ಣು ಮಗಳ ಮದುವೆ ಆಗಬೇಕಾದರೆ ಸುಮಾರು ರೂ. 30-50 ಸಾವಿರ ಖರ್ಚು ಆಗುತ್ತಿತ್ತು. ನನ್ನ ಮದುವೆಯಾಗಿ ಸುಮಾರು 25 ವರ್ಷ ಆಗಿರಬಹುದು.  2010 ಕ್ಕಿಂತ ಪೂರ್ವದಲ್ಲಿ ಮಸೂತಿ ಗ್ರಾಮದ ಎಲ್ಲಾ ಜಮೀನುಗಳು ಮಡ್ಡಿ ಜಮೀನು ಆಗಿದ್ದವು ಎಂದರೆ ಸರಿ. ಸದರಿ 2010 ಕ್ಕಿಂತ ಪೂರ್ವದಲ್ಲಿ ಮಡ್ಡಿ ಜಮೀನುಗಳಲ್ಲಿ ಹುಲ್ಲು ಮಾತ್ರ ಬೆಳೆಯುತ್ತಿತ್ತು ವಿನಹ ಯಾವುದೇ ಬೆಳೆ ಬೆಳೆಯುತ್ತಿರಲಿಲ್ಲ ಎಂದರೆ ಸರಿ.

7. ದಾವಾ ಆಸ್ತಿಯು ಮಡ್ಡಿ ಜಮೀನು ಇರುತ್ತದೆ ಎಂದರೆ ಸರಿ. ಮೊದಲಿಗೆ ಮಡ್ಡಿ ಜಮೀನು ಇದ್ದಾಗ ಜಮೀನಿನ ಮೌಲ್ಯವು ಪ್ರತಿ ಎಕರೆಗೆ ರೂ.10-15 ಸಾವಿರ ಇತ್ತು ಎಂದರೆ ಸರಿ. ನನ್ನ ತಂದೆಯು ಜಮೀನನ್ನು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ, 5 ಮತ್ತು 6 ನೇ ಪ್ರತಿವಾದಿಯರ ಮದುವೆಗಳಿಗೆ ರೂ. 3-4 ಲಕ್ಷ ಹಣವನ್ನು ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು 6 ನೇ ಪ್ರತಿವಾದಿಯ ಮದುವೆಯು ಒಂದೇ ಸಮಯದಲ್ಲಿ ಆಗಿರುತ್ತದೆ. 6 ನೇ ಪ್ರತಿವಾದಿಯ ಮದುವೆಯು ಬ.ಬಾಗೇವಾಡಿಯಲ್ಲಿ ಆಗಿರುತ್ತದೆ. 6 ನೇ ಪ್ರತಿವಾದಿಯ ಮದುವೆಗೆ ನನ್ನ ತಂದೆಯು ಸುಮಾರು ರೂ.30-50 ಸಾವಿರ ಖರ್ಚು ಮಾಡಿರಬಹುದು. ನನ್ನ ತಂದೆಯು ನಮ್ಮ ಮದುವೆಗಳನ್ನು ಸಾಲ ಮಾಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ತಂದೆಯು ನಮ್ಮ  ಮತ್ತು ಬೇರೆಯವರ ಜಮೀನುಗಳನ್ನು ಉಳುಮೆ ಮಾಡುತ್ತಿದ್ದರು ಎಂದು ಹೇಳುತ್ತಾರೆ.

8. 3ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ 2 ಕೊಳವೆ ಭಾವಿಗಳನ್ನು ತೆಗೆಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ 3 ಮತ್ತು 4ನೇ ಪ್ರತಿವಾದಿಯ ಅರ್ಧ ಅರ್ಧ ಭಾಗ ಮಾಡಿ ಉಳುಮೆ ಮಾಡುತ್ತಿರುತ್ತಾರೆ ಎಂದರೆ ಸರಿ. 4ನೇ ಪ್ರತಿವಾದಿಯು ಉಳುಮೆ ಮಾಡುತ್ತಿರುವ ಜಮೀನು ಒಣ ಬೇಸಾಯ ಇರುತ್ತದೆ ಎಂದರೆ ಸರಿ.

**ಈ ಹಂತರದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಾವಕಾಶ ಕೋರಿದ್ದರಿಂದ ಸಮಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**1ನೇ ಹೆಚ್ಚುವರಿ ಸಿವಿಲ್**
**ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**